ನೀಡಲಾಗುತ್ತಿದೆ ಮತ್ತು ಅವರುಗಳ ಮೇಲೆ ನಿಗಾ ವಹಿಸಲಾಗುತ್ತಿದೆ.

- ಕೊಲೆ, ಕಳ್ಳತನ ಮತ್ತು ದರೋಡೆ ಪ್ರಕರಣಗಳಲ್ಲಿ ಶಿಕ್ಷೆ ಅನುಭವಿಸಿ ಹೊರಬಂದ ಅಪರಾಧಿಗಳ ಕುರಿತು ಎಲ್ಲಾ ಠಾಣೆಗಳಿಗೆ ಮಾಹಿತಿ ರವಾನಿಸಿ, ಅವರುಗಳ ಚಲನವಲನದ ಬಗ್ಗೆ ನಿಗಾ ವಹಿಸಲಾಗುತ್ತಿದೆ.
- ಬೀದರ್ ಜಿಲ್ಲಾ ವ್ಯಾಪ್ತಿಯಲ್ಲಿ ಇರುವ ಎಲ್ಲಾ ಎಂ.ಓ.ಬಿ, ರೌಡಿ ಶೀಟರ್, ಅಪರಾಧಿಗಳ ಫಿಂಗರ್ ಪ್ರಿಂಟ್‌ನ್ನು ಪಡೆದು ಡಿಸಿಆರ್‌ಬಿ ಬೀದರ್ ಮತ್ತು ಫಿಂಗರ್ ಪ್ರಿಂಟ್ ಬ್ಯೂರೋ, ಬೆಂಗಳೂರು ಘಟಕಗಳಲ್ಲಿ ಸಂಗ್ರಹಿಸಿ ಇಡಲಾಗುತ್ತಿದೆ.

ಅಷ್ಟಪಥ ಮೇಲ್ಸೇತುವೆ ನಿರ್ಮಾಣ ಕಾಮಗಾರಿ

1106 (1554); ಶ್ರೀ ಅಶೋಕ್. ಆರ್ (ಪದ್ಮನಾಭ ನಗರ)

ಅ) ಒಕಳಿಪುರಂ ಅಷ್ಟಪಥ ಮೇಲ್ಸೇತುವೆ ನಿರ್ಮಾಣ ಕಾಮಗಾರಿಯು ಚಾಲನೆಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಈ ಮೆಲ್ಸೇತುವೆ ನಿರ್ಮಾಣ ಕಾಮಗಾರಿಗೆ ಒಪ್ಪಂದ ಕೊಟ್ಟಿದ್ದ ದಿನಾಂಕ ಯಾವುದು;

ಇ) ಸ್ವಾಧೀನ ಏನಾದರೂ ಇದ್ದಲ್ಲಿ, ಅದು ಯಾವಾಗ ಮುಕ್ತಾಯಗೊಳ್ಳುವುದು;

ಈ) ಈ ಕಾಮಗಾರಿ ವಿಳಂಬವಾಗಲು ನೀರು ಸರಬರಾಜು ಒಳಚರಂಡಿ ಮತ್ತು ವಿದ್ಯುತ್ ಮಾರ್ಗಗಳಿಂದ ಏನಾದರೂ ಅಡಚಣೆ ಇದೆಯೇ;

ಉ) ಹಾಗಿದ್ದಲ್ಲಿ, ಅವುಗಳನ್ನು ಯಾವಾಗ ಸ್ಥಳಾಂತರಿಸಲಾಗುವುದು;

ಊ) ಅಷ್ಟಪಥ ಮೇಲ್ಸೇತುವೆ ನಿರ್ಮಾಣ ಕಾಮಗಾರಿಯ ಒಟ್ಟು ಮೊತ್ತವೆಷ್ಟು; (ಗುತ್ತಿಗೆದಾರರು ಇದುವರೆಗೆ ಸಲ್ಲಿಸಿರುವ ಬಿಲ್ಲುಗಳ ವಿವರ ನೀಡುವುದು);

ಋ) ಈ ಅಷ್ಟಪಥ ಮೇಲ್ಸೇತುವೆ ಕಾಮಗಾರಿ ಕೈಗೊಂಡಿರುವ ಗುತ್ತಿಗೆದಾರರಿಗೆ ಇದುವರೆವಿಗೆ ಪಾವತಿಸಿರುವ ಮೊತ್ತವೆಷ್ಟು; (ವಿವರ ನೀಡುವುದು);

ೠ) ಈ ಅಷ್ಟಪಥ ಮೇಲ್ಸೇತುವೆ ನಿರ್ಮಾಣ ಕಾಮಗಾರಿಯನ್ನು ಯಾವಾಗ ಪೂರ್ಣಗೊಳಿಸಲಾಗುವುದು. ಈ ಬಗ್ಗೆ ಕಾನೂನು ತೊಡಕುಗಳೇನಾದರೂ ಇವೆಯೇ; ಹಾಗಿದ್ದಲ್ಲಿ, ಯಾವಾಗ ನಿವಾರಣೆ ಮಾಡಲಾಗುವುದು?

ಶ್ರೀ ಸಿದ್ದರಾಮಯ್ಯ (ಮಾನ್ಯ ಮುಖ್ಯಮಂತ್ರಿಗಳು)

ಅ) ಹೌದು.

ಆ) ಸದರಿ ಕಾಮಗಾರಿಯನ್ನು ಪ್ರಾರಂಭಿಸಲು ದಿನಾಂಕ: 10–12–2012 ರಂದು ಮೆ॥ ಸಿಂಪ್ಲೆಕ್ಸ್ ಇನ್‌ಫ್ರಾಸ್ಟ್ರಕ್ಚರ್ ಲಿಮಿಟೆಡ್ ಸಂಸ್ಥೆಗೆ ಟರ್ನ್‌ಕೀ (Turnkey – Fixed price) ಆಧಾರದಲ್ಲಿ ಒಪ್ಪಂದ ಮಾಡಿಕೊಂಡು ಕಾರ್ಯದೇಶವನ್ನು ನೀಡಲಾಗಿರುತ್ತದೆ.

ಇ) ಸದರಿ ಯೋಜನೆಗೆ ಅವಶ್ಯವಿರುವ 3.16 ಎಕರೆ ರೈಲ್ವೆ ಜಾಗವನ್ನು ಗುರುತಿಸಿದ್ದು, ಭೂ ವಿನಿಮಯ ಆಧಾರದಲ್ಲಿ ಸರ್ಕಾರದ ವತಿಯಿಂದ ಬಿನ್ನಿಮಿಲ್ ಬಳಿ 3.16 ಎಕರೆ ಬದಲಿ ಜಾಗವನ್ನು ರೈಲ್ವೇ ಇಲಾಖೆಗೆ ದಿನಾಂಕ: 21–03–2014 ರಂದು ಜಿಲ್ಲಾಧಿಕಾರಿಗಳು, ಬೆಂಗಳೂರು ಜಿಲ್ಲೆರವರು ಹಸ್ತಾಂತರಿಸಿರುತ್ತಾರೆ. ರೈಲ್ವೇ ಇಲಾಖೆಯಿಂದ ಬೇಕಾಗಿರುವ 3.16 ಎಕರೆ ಜಾಗವನ್ನು ಬಿ.ಬಿ.ಎಂ.ಪಿ. ಗೆ ಹಸ್ತಾಂತರಿಸಿದ್ದು, ಸದರಿ ಜಾಗದಲ್ಲಿರುವ ವಸತಿಗೃಹ, ರನ್ನಿಂಗ್ ರೂಂ ಕಟ್ಟಡ ಹಾಗೂ ವಿದ್ಯುತ್ ಇಲಾಖೆಯ ಕಟ್ಟಡ ಹಾಗೂ ಇತರೆ ಕಟ್ಟಡಗಳನ್ನು ತೆರವುಗೊಳಿಸಿದ

ನಂತರ ಸಂಪೂರ್ಣ 3.16 ಎಕರೆ ಜಾಗವನ್ನು ಬಿ.ಬಿ.ಎಂ.ಪಿ. ಯ ವಶಕ್ಕೆ ಪಡೆಯಲಾಗುತ್ತದೆ. ಈ ಸಂಬಂಧ ರೈಲ್ವೇ ಇಲಾಖೆಯ ಅಧಿಕಾರಿಗಳು 30 ದಿನಗಳಲ್ಲಿ ಇಲಾಖೆಯ ಕಟ್ಟಡ ಹಾಗೂ ಇತರೆ ಕಟ್ಟಡಗಳನ್ನು ತೆರವುಗೊಳಿಸುವುದಾಗಿ ತಿಳಿಸಿರುತ್ತಾರೆ.

ಈ) ನೀರು ಸರಬರಾಜು, ಒಳಚರಂಡಿ ಮತ್ತು ವಿದ್ಯುತ್ ಮಾರ್ಗಗಳನ್ನು ಸ್ಥಳಾಂತರಿಸಲು ದಿನಾಂಕ: 20–12–2012 ರಂದು ಬೆಸ್ಕಾಂ.ಗೆ ₹ 1,24,62,000–00, ಜಲಮಂಡಳಿಗೆ ₹ 15,90,000–00 ಹಾಗೂ ಬಿ.ಎಸ್.ಎನ್.ಎಲ್ ಸಂಸ್ಥೆಗೆ ₹ 21,93,127–00 ಗಳನ್ನು ಪಾವತಿಸಲಾಗಿದ್ದು, ಇದರಿಂದ ಅಡಚಣೆ ಇರುವುದಿಲ್ಲ.

ಉ) ಬದಲಿ ರಸ್ತೆ ಪೂರ್ಣಗೊಂಡ ನಂತರ ನೀರು ಸರಬರಾಜು, ಒಳಚರಂಡಿ ಮತ್ತು ವಿದ್ಯುತ್ ಮಾರ್ಗಗಳನ್ನು ಸ್ಥಳಾಂತರಿಸಲಾಗುವುದು.

ಊ) ಕಾಮಗಾರಿಯ ನಿರ್ಮಾಣಕ್ಕಾಗಿ ಒಟ್ಟು ₹ 115.50 ಕೋಟಿ ನಿಗಧಿಯಾಗಿರುತ್ತದೆ. ಗುತ್ತಿಗೆದಾರರು ₹ 2.20 ಕೋಟಿಗಳಿಗೆ ಬಿಲ್ಲನ್ನು ಸಲ್ಲಿಸಿದ್ದು, ಪರಿಶೀಲನೆ/ಅಭಿಪ್ರಾಯಕ್ಕಾಗಿ ಯೋಜನಾ ಸಲಹೆಗಾರರಾದ ಮೆ॥ ಮಾನಸ ಕನ್ಸಲ್ಟೆಂಟ್ಸ್ ರವರಿಗೆ ಸಲ್ಲಿಸಲಾಗಿರುತ್ತದೆ.

ಋ) ಬ್ಯಾಂಕ್ ಗ್ಯಾರಂಟಿ ಆದಾರದ ಮೇರೆಗೆ ₹ 5.00 ಕೋಟಿಗಳನ್ನು ಶೇಖರಣೆ/ಸಂಗ್ರಹಣೆ (ಮೊಬಲೈಸೇಶನ್ ಅಡ್ವಾನ್ಸ್) ಮೊತ್ತವನ್ನು ದಿನಾಂಕ: 25–10–2013 ರಂದು ಪಾವತಿಸಲಾಗಿರುತ್ತದೆ.

ಋ) ಸದರಿ ಕಾಮಗಾರಿಯನ್ನು ಪೂರ್ಣಗೊಳಿಸಲು 18 ತಿಂಗಳುಗಳ ಅವಧಿಯನ್ನು ನಿಗದಿಪಡಿಸಲಾಗಿದ್ದು, ಕಾಮಗಾರಿಯನ್ನು ಮಾರ್ಚ್–2015 ಕ್ಕೆ ಪೂರ್ಣ ಪ್ರಮಾಣದಲ್ಲಿ ಪ್ರಾರಂಭಿಸಲು ಉದ್ದೇಶಿಸಿದ್ದು ಸೆಪ್ಟೆಂಬರ್–2016 ರ ವೇಳೆಗೆ ಪೂರ್ಣಗೊಳಿಸಲಾಗುವುದು.